O.S.No.:58/2021

PW.:1

**ದಿಃ 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ Sri.SBH ವಕೀಲರಿಂದಃ**

ನಮ್ಮ ತಂದೆಗೆ ದಾವಾ ಆಸ್ತಿಯು ಯಾವ ರೀತಿ ಬಂದಿರುತ್ತದೆ ಎಂದು ನನಗೆ ನೆನಪಿಲ್ಲ. ನಮ್ಮ ತಂದೆಗೆ ಯಾವ ನಾತೆಯಿಂದ ಆಸ್ತಿ ಬಂದಿರುತ್ತದೆ ಎಂಬ ಬಗ್ಗೆ ಉತಾರ ನೋಡಿರುತ್ತೇನೆ, ಯಾವ ಇಸ್ವಿಯ ಉತಾರ ಎಂದು ನನಗೆ ನೆನಪಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳು ಇವೆ, ನಾನು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಗ್ರಾಮ ಪಂಚಾಯಿತಿ ಆಸ್ತಿ ನಂ.192/ಎ, 192/ಬಿ ತಪ್ಪಾಗಿ ನಮೂದಿರುವ ಬಗ್ಗೆ ಸರಿಪಡಿಸಲು ಅರ್ಜಿ ಕೊಟ್ಟಿರುತ್ತೇನೆ. ಯಾವಾಗ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಸುಮಾರು 6-7 ತಿಂಗಳ ಹಿಂದೆ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ನಿಪಿ-2 ರಲ್ಲಿರುವ ವಿಷಯಗಳನ್ನು ಓದಿ ತಿಳಿದುಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನಿಪಿ-2 ರ ವಿಷಯ ಸರಿಯಿದೆ. ಸದರಿ ದಾವೆದಲ್ಲಿ ಪಂಚಾಯಿತಿಯನ್ನು ಪಕ್ಷಗಾರ ಮಾಡಿಲ್ಲ ಎಂದರೆ ಸರಿ. ಆ ರೀತಿ ಪಂಚಾಯಿತಿಯನ್ನು ಪಾರ್ಟಿ ಮಾಡಲು ಯಾವುದೇ ತೊಂದರೆ ಇರಲಿಲ್ಲ.

ಪ್ರತಿವಾದಿಯರು ಯಾರೂ ಪಂಚಾಯಿತಿ ಸದಸ್ಯರಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ 7 ಪಂಚಾಯಿತಿ ಸದಸ್ಯರಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾವೆ ಹೂಡುವ ಮೊದಲು ಪ್ರತಿವಾದಿಯರಿಗೆ ನೋಟೀಸ್ ಕೊಟ್ಟಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಅವರಾದಿ ಪಂಚಾಯಿತಿಯಲ್ಲಿ ಒಟ್ಟು 22 ಸದಸ್ಯರು ಇರುತ್ತಾರೆ ಎಂದರೆ ಸರಿ. ಪಂಚಾಯಿತಿಯಲ್ಲಿ ಯಾವ ಊರಿಂದ ಎಷ್ಟು ಸದಸ್ಯರಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಉಚ್ಚ ನ್ಯಾಯಾಯಲಕ್ಕೆ ಸಲ್ಲಿಸಿರುವ ಮೇಲ್ಮನವಿ ನಂಬರ ನನಗೆ ಗೊತ್ತಿಲ್ಲ, ಯಾವ ಇಸ್ವಿಯಲ್ಲಿ ಸಲ್ಲಿಸಿರುತ್ತೇನೆ ಎಂದು ನೆನಪಿಲ್ಲ. ದಿಃ 04.01.2022 ರಂದು ಹಳೇಯರಗುದ್ರಿ ಗ್ರಾಮದ ಗಾವಠಾಣಾ ಮತ್ತು ಮುಸ್ಲಿಂ ಸಮಾಜದ ಕಬರ ಸ್ಥಾನದ ಹದ್ ಬಸ್ತಿಗಾಗಿ PDO ರವರು ADLR ಗೋಕಾಕರವರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ADLR ಗೋಕಾಕರವರು ಸದರಿ ಅರ್ಜಿಯನ್ನು ತಹಶೀಲ್ದಾರ ಮೂಡಲಗಿ ರವರಿಗೆ ಕಳುಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 10.01.2022 ರಂದು ತಹಶೀಲ್ದಾರ ಮೂಡಲಗಿ ರವರು ಸದರಿ ಅರ್ಜಿಯನ್ನು ಮೊಜನಿಗಾಗಿ ADLR ಗೋಕಾಕರವರಿಗೆ ಕಳುಹಿಸಿರುತ್ತಾರೆ ಎಂದರೆ ಸರಿ.

ಆ ಪ್ರಕಾರ ತಾಲೂಕಾ ಸರ್ವೆಯರ್ ನನಗೆ, PDO ರವರಿಗೆ ಹಾಗೂ ಅಕ್ಕಪಕ್ಕದವರಿಗೆ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ಈ ಬಗ್ಗೆ ನಾನು ದಿಃ 08.03.2024 ರಂದು ತಕರಾರು ಕೊಟ್ಟಿರುತ್ತೇನೆ ಎಂದರೆ ಸರಿ. ದಿಃ 09.03.2022 ರಂದು ಮೊಜನಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 17.03.2022

ರಂದು ತಹಶೀಲ್ದಾರ ಮೂಡಲಗಿರವರಿಗೆ ಪಿಟಿ ಶೀಟ ಮೂಲಕ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ವರದಿ ಪ್ರಶ್ನಿಸಿ ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ WP No.102013/2023 ಸಲ್ಲಿಸಿರುತ್ತೇವೆ ಎಂದರೆ ಸರಿ. ದಿಃ 09.03.2022 ರ ಪಿಟಿ ಶೀಟನ್ನು JDLR ವ DDLR ರವರ ಮುಂದೆ ಪ್ರಶ್ನಿಸಿಲ್ಲ ಎಂದರೆ ಸರಿ.

ಗಾವಠಾಣಾ ಜಾಗ ನನ್ನ ಹೆಸರಿನಲ್ಲಿ ಇರುವುದನ್ನು ದುರುಪಯೋಗಪಡಿಸಿಕೊಂಡು ಸುಮಾರು 30 ಜನರಿಗೆ ಹಕ್ಕು ಬಿಟ್ಟು ಕೊಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಜನರಿಂದ ಸುಮಾರು 20-30 ಸಾವಿರಗಳನ್ನು ತೆಗೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿರುವ ನನ್ನ ಜಾಗವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಆಸ್ತಿಯಾದ ಸರ್ವೇ ನಂ.74/4, 192/ಬಿ ಮತ್ತು 192/ಡಿ ನೇದ್ದರಲ್ಲಿ ಕೊಟ್ಟಿರುತ್ತೇನೆ. ನಾನು ಹಕ್ಕು ಬಿಟ್ಟು ಕೊಟ್ಟ ಪತ್ರಗಳಲ್ಲಿ ಆಸ್ತಿ ನಂಬರ ನಮೂದು ಮಾಡಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಖುಲ್ಲಾ ಜಾಗ ಎಂದು ನಮೂದು ಇದೆ ಎಂದು ನುಡಿಯುತ್ತಾರೆ. ಸದರಿ ಕೊಟ್ಟಂತ ಆಸ್ತಿಗಳು ಇಂದಿಗೂ ಸಹ ಬಿನ್ ಶೇತ್ಕಿ ಆಗಿಲ್ಲ ಎಂದರೆ ಸರಿ. ಹಕ್ಕು ಬಿಟ್ಟು ಕೊಟ್ಟ ಪತ್ರಗಳು ನೊಂದ ಆಗಿಲ್ಲ ರೂ.50 ರ ಬಾಂಡನಲ್ಲಿವೆ ಎಂದರೆ ಸರಿ.

ಗಾವಠಾಣಾ ಜಾಗದ ದಕ್ಷಿಣಕ್ಕೆ ಸರ್ವೇ ನಂ.74 ಇರುತ್ತದೆ ಎಂದರೆ ಸರಿ. ಅದೇ ರೀತಿ ಪಶ್ಚಿಮಕ್ಕೆ ಸರ್ವೇ ನಂ.37 ಇರುತ್ತದೆ ಎಂದರೆ ಸರಿ. ಕೊಟ್ಟಂತ ಆಸ್ತಿಗಳು ಗಾವಠಾಣಾ ಆಸ್ತಿ ಇರುವುದರಿಂದಲೇ ಹಕ್ಕು ಬಿಟ್ಟು ಕೊಟ್ಟ ಪತ್ರಗಳಲ್ಲಿ ಆಸ್ತಿ ನಂಬರ ನಮೂದು ಮಾಡಿಲ್ಲ ಎಂದರೆ ಸುಳ್ಳು. ತಹಶೀಲ್ದಾರ ಮೂಡಲಗಿ ಇವರು ತಯಾರಿಸಿದ ನಕಾಶೆಯನ್ನು ತಪ್ಪಾಗಿದೆ ಎಂದು ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಗಾವಠಾಣಾ ಆಸ್ತಿ ಇದ್ದರೂ ಸಹ ನನ್ನ ಸ್ವಂತ ಆಸ್ತಿ ಎಂದು ದಾವೆ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ಗಾವಠಾಣಾ ಆಸ್ತಿ ಪಡೆದುಕೊಳ್ಳುವ ಉದ್ದೇಶದಿಂದ ಸದರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನಿಮ್ಮ ಮೌಖಿಕ ಹೇಳಿಕೆ ಹೊರತುಪಡಿಸಿ ಸದರಿ ದಾವಾ ಆಸ್ತಿ ನಿಮ್ಮ ಹಿರಿಯರಿಂದ ಬಂದದ್ದು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು ದಾಖಲೆಗಳು ಇವೆ ಎಂದು ನುಡಿಯುತ್ತಾರೆ. ಅದೇ ರೀತಿ ದಾವಾ ಆಸ್ತಿ ನಿಮ್ಮ ಕಬ್ಜೆಯಲ್ಲಿದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು ನಮ್ಮ ಕಬ್ಜಾದಲ್ಲೆ ಇದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ನಿಮ್ಮ ಹೆಸರಿನಲ್ಲಿ ಇದೆ ಎಂದು ತೋರಿಸಲು ಯಾವುದಾದರೂ ಮಾಲ್ಕಿ ಪತ್ರಗಳು ಇವೆಯಾ ಎಂದು ಸಾಕ್ಷಿಯು ಸದರಿ ಆಸ್ತಿ ನಮ್ಮ ಮೂಲ ಹಿರಿಯರಿಂದ ಬಂದಿರುತ್ತವೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿಯರು ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ವಕೀಲರಿಂದ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ವಕೀಲರು ಪ್ರತಿವಾದಿಯರು ತಕರಾರು ಸಲ್ಲಿಸಿರುವ ಬಗ್ಗೆ ತಿಳಿಸಿದ್ದು ವಿಷಯ ನನಗೆ ನೆನಪಿಲ್ಲ. ಹಳೇ ಯರಗುದ್ರಿ ಗ್ರಾಮ ಕುಲಗೋಡ ಪೊಲೀಸ್ ಠಾಣೆಗೆ ಹತ್ತಿರ ಇದೆ ಎಂದರೆ ಸರಿ.

ಪ್ರತಿವಾದಿಯರು ದಿಃ 17.07.2021 ರಲ್ಲಿ ತಕರಾರು ಮಾಡಿರುವ ಬಗ್ಗೆ ನಾವು ದೂರು ಕೊಟ್ಟಿಲ್ಲ. ಆ ರೀತಿ ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಪೊಲೀಸರು ನ್ಯಾಯಾಲಯಕ್ಕೆ ಹೋಗಿ ಎಂದು ಹೇಳಿರುತ್ತಾರೆ. ಆನಂತರ ಮೇಲಾಧಿಕಾರಿಗಳಿಗೆ ಆ ಬಗ್ಗೆ ದೂರು ಕೊಟ್ಟಿರುತ್ತೀರಾ ಎಂದರೆ ಇಲ್ಲ. ದಿಃ 17.07.2021 ರಂದು ರಾತ್ರಿ ಸುಮಾರು 1-30 ಗಂಟೆಗೆ ಪ್ರತಿವಾದಿಯರು ಜಾಗಕ್ಕೆ ಬಂದಿದ್ದರು. ಸದರಿ ಜಾಗ ಖುಲ್ಲಾ ಜಾಗ ಇರುತ್ತದೆ ಎಂದರೆ ಸರಿ.

ಪ್ರತಿವಾದಿಯರು ಬರುವ ಬಗ್ಗೆ ಮೊದಲೇ ವಿಷಯ ಗೊತ್ತಿದ್ದರಿಂದ ನಾವು ಅಲ್ಲಿಗೆ ಹೋಗಿದ್ದೆವು. ದಾವೆ ಸಲ್ಲಿಸುವ ಮೊದಲೇ ಮೇಲಿನ ವಿಷಯದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ. ದಾವಾ ಕಾಲಕ್ಕೆ ಈ ಬಗ್ಗೆ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ಸದರಿ ವಿಷಯವನ್ನು ವಾದ ಪತ್ರ ಹಾಗೂ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ದಿಃ 06.08.2021 ರಂದು ಸದರಿ ದಾವೆ ಹೂಡಿರುತ್ತೇನೆ ಎಂದರೆ ಸರಿ. ನೀವು ಆಸ್ತಿ ಮಾಲೀಕ ಎಂದು ಮಾಗಣಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸುಳ್ಳು ನಾನು ಯಾವುದೇ ರೀತಿ ಮಾಗಣಿ ಕೇಳಿಲ್ಲ ಎಂದು  ನುಡಿಯುತ್ತಾರೆ. ಆ ರೀತಿ ಮಾಲೀಕ ಎಂದು ಮಾಗಣಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆ ವಿಷಯವೇ ಬಂದಿಲ್ಲ ನಾನು ಆ ರೀತಿ ಮಾಗಣಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದ ಹಾಗೂ ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದ ಎಲ್ಲ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಮೇಲೆ ಹೇಳಿದ ರೀತಿ ಯಾವುದೇ ಘಟನೆ ನಡೆದಿಲ್ಲ, ದಾವಾ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.